ಅ) – ಹೌದು–

ಆ) ಆಗಿಂದಾಗ್ಗೆ ಹೋಟೆಲ್ ಮಾಲೀಕರ ಸಂಘದವರನ್ನು ಕರೆದು ಸಭೆ ಜರುಗಿಸಿ ಹೋಟೆಲುಗಳಲ್ಲಿನ ತಿಂಡಿ ಪದಾರ್ಥಗಳ ಬೆಲೆ ಇಳಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ ಎಫ್‌ಟಿಡಿ 40 ಡಿಐಎಂ 84 ದಿನಾಂಕ: 7–7–85ರಲ್ಲಿ ಆಹಾರ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಹೋಟೆಲು ತಿಂಡಿಗಳ ಬೆಲೆಗಳು ಏರಿಕೆ ಮಟ್ಟದಲ್ಲಿದ್ದಾಗ ಯಾವ ರೀತಿಯಾಗಿ ಇವುಗಳನ್ನು ಇಳಿಸಲು ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಗಣಿಸಲಾಗುತ್ತಿದೆ. ದಿನಾಂಕ: 25–4–92 ರಂದು ಹೋಟೆಲು ಮಾಲೀಕರ ಸಂಘದೊಂದಿಗೆ ಸಭೆ ಜರುಗಿಸಿ ಹೋಟೆಲುಗಳ ತಿಂಡಿ ಪದಾರ್ಥಗಳ ಬೆಲೆ ಕಡಿಮೆಗೊಳಿಸಲು ಪ್ರಯತ್ನಿಸಲಾಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಮುಖ್ಯಮಂತ್ರಿ ಅವರ ಪರವಾಗಿ):– ಭಾರತ ಸಂವಿಧಾನದ 151 (2) ನೇ ಅನುಚ್ಛೇದದ ಮೇರೆಗೆ:– ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಅ) 1) ಧನ ವಿನಿಯೋಗ ಲೆಕ್ಕಪತ್ರಗಳು,
2) ಹಣಕಾಸು ಲೆಕ್ಕಪತ್ರಗಳು ಹಾಗೂ
3) 1991ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ನಿಯಂತ್ರಕ ಹಾಗೂ ಮಹಾಲೇಖಾ ಪರೀಕ್ಷಕರವರ ವರದಿ (ನಂ. 3 ಸಿವಿಲ್)

ಆ) ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ 1990–91ನೇ ಸಾಲಿನ ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ರಾಜಸ್ವ) ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು:– ಕಾಗದ ಪತ್ರಗಳನ್ನು ಮಂಡಿಸಲಾಯಿತು

4. ವರದಿಯನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ (ಅಧ್ಯಕ್ಷರು, ಹಕ್ಕು ಭಾದ್ಯತಾ ಸಮಿತಿ) ಅವರು ಹಕ್ಕು ಭಾದ್ಯತಾ ಸಮಿತಿಯ ಎರಡನೆಯ ವರದಿಯನ್ನೊಪ್ಪಿಸುವುದು.

5. ವರದಿಯ ಪರಿಶೀಲನಾ ಸೂಚನೆ

ಶ್ರೀ ಜಿ.ಎಸ್. ಶಿವನಂಜಪ್ಪ (ಅಧ್ಯಕ್ಷರು, ಹಕ್ಕು ಭಾದ್ಯತಾ ಸಮಿತಿ) ಅವರು:–

ಅ) ಹಕ್ಕು ಬಾಧ್ಯತಾ ಸಮಿತಿಯ ಎರಡನೇ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುವುದು.

ಆ) ಹಾಗೂ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷಿಣಿಯವರೆ, ಬೆಳಗಾವಿ ಮೇಯರ್ ಸಂಭಾಜಿ ಪಾಟೀಲ್ ಎನ್ನತಕ್ಕಂಥವರನ್ನು ಮೇಯರ್ ಆಗಿ ಮೂರ್ನಾಲ್ಕು ದಿವಸಗಳಿಂದ ಇನ್ನೂ ಅವರನ್ನು ಬಂಧನದಲ್ಲಿ ಇಟ್ಟಿದ್ದಾರೆ. ಯಾವ ಕಾರಣಕ್ಕಾಗಿ ಮೇಯರ್‌ರವರನ್ನು ಬಂಧನದಲ್ಲಿ ಇಟ್ಟಿರತಕ್ಕಂಥಾದ್ದು ? ಈ ಪ್ರಶ್ನೆ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಬಾಕಿ ವಿಷಯಗಳನ್ನು ಲಂಚ್ ಟೈಮ್ ನಂತರ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷಿಣಿಯವರು:– ಕ್ವೊಶ್ಚನ್ ಅವರ್‌ನಲ್ಲಿ ಬಹಳ ಟೈಂ ತೆಗೆದುಕೊಂಡಿದ್ದರಿಂದ ಇವತ್ತು ಲಂಚ್ ಬ್ರೇಕ್ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ಲಂಚ್‌ಗೆ 45 ನಿಮಿಷ ಹೊರಗೆ ಹೋಗಿ ಬರೋಣ.

ಶ್ರೀ ಬಸವರಾಜರಾಯರೆಡ್ಡಿ:– ಈಗಾಗಲೇ ಮೂರೂವರೆ ಗಂಟೆ ಆಯಿತು. ಊಟದ ಟೈಮ್ ಮುಗಿದು ಹೋಗಿದೆ. ಕಂಟಿನ್ಯೂ ಮಾಡಬಹುದು.

ಉಪಾಧ್ಯಕ್ಷಿಣಿಯವರು:– ಮೂರೂವರೆ ಗಂಟೆ ಅಲ್ಲ ಎರಡೂವರೆ ಗಂಟೆ.

ಶ್ರೀ ಜೀವರಾಜ ಆಳ್ವ:– ಕಂಟಿನ್ಯೂ ಮಾಡೋಣ.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ</u>

1. <u>ಬೆಳಗಾವಿ ಮೇಯರ್ ಸಾಂಭಾಜಿ ಪಾಟೀಲರ ಬಂಧನ</u>

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷಿಣಿಯವರೆ, ಸಂಸದೀಯ ಸಚಿವರು ಇಲ್ಲಿಯೇ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಮುಖ್ಯ. ಮಂತ್ರಿಗಳಿಲ್ಲ. ಸಂಭಾಜಿ ಪಾಟೀಲರೆಂದು ಹೇಳಿ ಬೆಳಗಾವಿ ಮೇಯರ್‌ರವರು. ಅವರು ಚುನಾಯಿತರಾಗಿ ಒಂದು ವಾರ ಆಗಿದ್ದರೂ ಅವರನ್ನು ಇನ್ನೂ ಜೈಲಿನಲ್ಲೇ ಇಟ್ಟಿದ್ದಾರೆ. ಇದರ ರಹಸ್ಯ ಏನು ? ಕಾರಣ ಏನು ? ಯಾವ ಕಾರಣಕ್ಕೋಸ್ಕರ ಅವರನ್ನು ಬಿಡುತ್ತಿಲ್ಲ ? ಅವರು ಕರ್ನಾಟಕದ ಪರವಾಗಿರತಕ್ಕಂಥ ಉದ್ದೇಶದಿಂದ ಕೇಂದ್ರದ ಗೃಹ ಮಂತ್ರಿಗಳು, ಕೇಂದ್ರದ ಕೆಲವು ರಾಜಕಾರಣಿಗಳ ಒತ್ತಡದಿಂದ ಅವರನ್ನು ಒಳಗಡೆ ಇಟ್ಟಿದ್ದೀರಿ. ರಾಜ್ಯ ಸರ್ಕಾರ ಈ ಬಗ್ಗೆ ತೀವ್ರ ಕ್ರಮ ಕೈಗೊಂಡು ಅವರನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ? ಪ್ರಜಾಪ್ರಭುತ್ವ ದೃಷ್ಟಿಯಿಂದ ಚುನಾಯಿತರಾಗಿರತಕ್ಕಂಥ ಮೇಯರ್‌ರವರನ್ನು ತಾವು ಬಂಧನದಲ್ಲಿ ಇಟ್ಟಿರತಕ್ಕಂಥಾದ್ದು ಸರಿಯೇ ? ಅವರನ್ನು ಯಾವ ಕಾರಣದ ಮೇಲೆ ಬಂಧನದಲ್ಲಿ ಇಟ್ಟಿದ್ದೀರಿ ? ಯಾವ ಕೇಸ್ ಮೇಲೆ ಅವರನ್ನು ಇಟ್ಟಿದ್ದೀರಿ ? ಆದ್ದರಿಂದ ದಯಮಾಡಿ ಸರ್ಕಾರದ ನಿಲುವು ಏನು ಈ ಬಗ್ಗೆ ? ಯಾವಾಗ ಅವರನ್ನು ಬಿಡುಗಡೆ ಮಾಡುತ್ತೀರಿ ? ಕೂಡಲೇ ಇದರ ಬಗ್ಗೆ ಒಂದು ಹೇಳಿಕೆಯನ್ನು ಸರ್ಕಾರ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಲ್ಲಿಂದ ಕನ್ನಡದ ಕಾರ್ಪೋರೇಟರುಗಳು, ಉರ್ದು ಕಾರ್ಪೋರೇಟರುಗಳು ಬೇರೆ ಅನೇಕ ಜನ ಮುಖಂಡರುಗಳು ಇಲ್ಲಿಗೆ ಬೆಂಗಳೂರಿಗೆ ಬಂದಿದ್ದಾರೆ. ಅವರನ್ನು ಬಿಡುಗಡೆ ಮಾಡಬೇಕೆಂದು ಹೇಳಿ ಅವರ ಪತ್ನಿಯವರು ಸಹಾ ಇಲ್ಲಿಗೆ ಬಂದಿದ್ದಾರೆ. ಯಾವ ಕಾರಣಕ್ಕೋಸ್ಕರ ಚುನಾಯಿತರಾಗಿರತಕ್ಕಂಥ ಒಬ್ಬ ಮೇಯರ್‌ರವರನ್ನು ಅದರಲ್ಲೂ ತೆಗೆದುಕೊಂಡು ಹೋಗಿ ಬಳ್ಳಾರಿ ಜೈಲಿನಲ್ಲಿ ಇಟ್ಟಿದ್ದೀರಿ. ಯಾವ ಉದ್ದೇಶಕ್ಕೋಸ್ಕರ ಇಟ್ಟಿದ್ದೀರಿ ? ಏನು ಉದ್ದೇಶ ? ಅವರು ಕರ್ನಾಟಕದ ಪರ ಇದ್ದರೆಂದು ಏನು ? ಕನ್ನಡಿಗರ ಪರವಾದರೆಂದು ಏನು ? ಅವರು ಹೊರಗಡೆ ಬಂದಿರುವುದರಿಂದ ಇವತ್ತು ಎಂ.ಇ.ಎಸ್. ಎರಡು ಭಾಗ ಆಗಿದೆ. ನಿಜ ನಾವು ಸಂತೋಷ ಪಡುತ್ತೇವೆ. ಅಂಥಾ ಒಬ್ಬ ಮೇಯರ್‌ರವರನ್ನು ಒಳಗಡೆ ಇಡತಕ್ಕಂಥ ಕಾರಣ ಏನು ? ಈ ಉದ್ದೇಶವನ್ನು ಸರ್ಕಾರ ಸ್ಪಷ್ಟ ಪಡಿಸಬೇಕು. ಈ ಬಗ್ಗೆ ಸರ್ಕಾರದ ನಿಲುವು ಏನೆಂದು ಹೇಳಬೇಕು ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮುಖ್ಯಮಂತ್ರಿಗಳು ಬರುತ್ತಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ, ವಿಷಯ ಸಂಗ್ರಹಣೆ ಮಾಡಿ ಹೇಳುತ್ತಾರೆ.